# ಸುದ್ದಿಸಂಚಯ

## ನಾಗಪುರದಲ್ಲಿ ಶ್ರೀರಾಮಕೃಷ್ಣರ ಮಂದಿರದ ಉದ್ಘಾಟನೆ

ಒಂದು ಸಣ್ಣ ಗುಡಿಸಿಲಿನಲ್ಲಿ ೧೯೨೮ರಲ್ಲಿ ಪ್ರಾರಂಭವಾದ ಮಹಾರಾಷ್ಟ್ರದ ನಾಗಪುರದಲ್ಲಿರುವ ರಾಮಕೃಷ್ಣ ಮಠ ಕೇಂದ್ರವು ವಿದ್ಯಾರ್ಥಿಗಳಿಗೆ ಉಚಿತವಾದ ನಿವಾಸವನ್ನು ೧೯೩೨ರಿಂದ ನೀಡುತ್ತ ಬಂದಿದೆ. ಇವರೊಂದಿಗೆ ಉಚಿತವಾದ ಔಷಧಾಲಯ, ಸಂಚಾರಿ ಆಸ್ಪತ್ರೆ, ಫಿಸಿಯೋಥೆರಪಿ ವಿಭಾಗ ಹಾಗೂ ಮರಾಠಿ ಮತ್ತು ಹಿಂದಿಯಲ್ಲಿ ರಾಮಕೃಷ್ಣ-ವಿವೇಕಾನಂದ-ವೇದಾಂತ ಸಾಹಿತ್ಯದ ಪ್ರಕಟನಾ ಕೇಂದ್ರವನ್ನು ಹೊಂದಿದೆ. ನಿರಂತರವಾಗಿ ಸೇವೆ ಸಲ್ಲಿಸಿಕೊಂಡು ಬಂದಿರುವ ಈ ಕೇಂದ್ರದ ಪ್ರಾರಂಭ ದಿನಗಳಲ್ಲಿ ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಶಿವಾನಂದಜಿ ಹಾಗೂ ಸ್ವಾಮಿ ಅಖಂಡಾನಂದಜಿ ಇಲ್ಲಿ ಕೆಲಕಾಲ ತಂಗಿದ್ದರು. ಪೂಜ್ಯ ಯತೀಶ್ವರಾನಂದಜಿ ಮಹಾರಾಜರು ಹಾಗೂ ಅನೇಕ ಯತಿಗಳ ಪವಿತ್ರ ವಾಸ್ತವ್ಯದಿಂದಲೂ ಈ ಸ್ಥಳ ಮಹಿಮೆಯನ್ನು ಪಡೆದುಕೊಂಡಿದೆ.

೨೦೦೬ರ ಫೆಬ್ರವರಿ ೧೧ರಂದು ನೂತನವಾಗಿ ನಿರ್ಮಾಣಗೊಂಡ ಶ್ರೀರಾಮಕೃಷ್ಣರ ಮಂದಿರದ ಉದ್ಘಾಟನೆಯನ್ನು ನೆರವೇರಿಸಲಾಯಿತು. ಒಂದು ವಾರದ ಕಾಲ ವಿಶೇಷ ಉಪನ್ಯಾಸ ಹಾಗೂ ಸಂಗೀತಾದಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ರಾಮಕೃಷ್ಣ ಸಂಘದ ಪರಮ ಪೂಜ್ಯ ಅಧ್ಯಕ್ಷರು, ಉಪಾಧ್ಯಕ್ಷರೂ ಸೇರಿದಂತೆ ೩೮೧ ಯತಿಗಳ ಸಮಾವೇಶವಿತ್ತು ಹಾಗೂ ೯೦೦೦ ಭಕ್ತರು ಭಾರತದ ಎಲ್ಲೆಡೆಯಿಂದ ಬಂದು ಭಾಗವಹಿಸಿದರು. ಮೆರವಣಿಗೆಯೊಂದಿಗೆ ಪ್ರಾರಂಭವಾದ ಉತ್ಸವವು ನಯನಮನೋಹರವಾಗಿದ್ದು ಆಧ್ಯಾತ್ಮಿಕತೆಯ ವಾತಾವರಣವನ್ನು ಸೃಷ್ಟಿಸಿ ನೆರೆದವರೆಲ್ಲರಿಗೂ ಸಾತ್ತ್ವಿಕವಾದ ವಿಶೇಷ ಅನುಭವವನ್ನು ನೀಡಿತು. ✪

### ನಾಗಪುರದ ಮಹೋತ್ಸವದ ಕೆಲವು ಸ್ಮರಣೀಯ ದೃಶ್ಯಗಳು



ವಿಷ್ಣು ಪಂಚಾಯತನ ಹೋಮ



ಉದ್ಘಾಟನೆಗೆ ಮುನ್ನ ಶೋಭಾಯಾತ್ರೆ



ಸಂಕೀರ್ತನೆಯಲ್ಲಿ ತಲ್ಲೀನರಾದ ಸಾಧು-ಬ್ರಹ್ಮಚಾರಿಗಳು



ಶ್ರೀರಾಮಕೃಷ್ಣರ ಮೂರ್ತಿಗೆ ಸ್ವಾಮಿ ಗಹನಾನಂದಜಿ ಅವರ ಪೂಜೆ